ಆಫ್ ಮೈಸೂರು, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕುಗಳ ಎ.ಟಿ.ಎಂ.ಗಳಲ್ಲಿ ನೂರಕ್ಕೆ ನೂರರಷ್ಟು ಕನ್ನಡವನ್ನು ಅಳವಡಿಸಲಾಗಿದೆ. ವಿಜಯಾ ಬ್ಯಾಂಕ್ ಎ.ಟಿ.ಎಂ.ಗಳಲ್ಲಿ ಶೇ. 50 ರಷ್ಟು ಕನ್ನಡವನ್ನು ಅಳವಡಿಸಲಾಗಿದೆ. ಇವಲ್ಲದೆ ಹೆಚ್.ಡಿ.ಎಫ್.ಸಿ. ಮತ್ತು ಐ.ಸಿ.ಐ.ಸಿ.ಐ ಬ್ಯಾಂಕುಗಳಿಗೆ ಪತ್ರ ಬರೆದು ಎ.ಟಿ.ಎಂ.ನಲ್ಲಿ ಕನ್ನಡ ಅಳವಡಿಸಲು ಒತ್ತಾಯಿಸಲಾಗಿದೆ.

ಬಂಗಾರ ಪೇಟೆ ಕ್ಷೇತ್ರದ ಅಬಕಾರಿ ಸನ್ನದು

158(335) ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ) :– ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬಂಗಾರಪೇಟೆ ಕ್ಷೇತ್ರದಲ್ಲಿರುವ ಒಟ್ಟು ಸನ್ನದುಗಳ ಸಂಖ್ಯೆ ಎಷ್ಟು ; (ವರ್ಗವಾರು ಸನ್ನದುಗಳ ವಿವರ ನೀಡುವುದು)

ಆ) ಸನ್ನದುಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು ? (ವರ್ಗವಾರು ವಿವರ ನೀಡುವುದು)

ಶ್ರೀ ಸತೀಶ್ ಲಕ್ಷಣರಾವ್ ಜಾರಕಿಹೊಳಿ, ಮಾನ್ಯ ಅಬಕಾರಿ ಸಚಿವರು :–

ಅ) ಕೋಲಾರ ಜಿಲ್ಲೆಯ ಬಂಗಾರ ಪೇಟೆ ಕ್ಷೇತ್ರದಲ್ಲಿ 2013–14ನೇ ಸಾಲಿಗೆ ಒಟ್ಟು ಸನ್ನದುಗಳ ಸಂಖ್ಯೆ : 35 ವರ್ಗವಾರು ವಿವರ ಈ ಕೆಳಕಂಡಂತಿದೆ.

CL-2	CL-7	CL-8	RVB	CL-9	CL-IIc	Total
15	03	01	01	14	01	35

ಆ) 2013–14ನೇ ಸಾಲಿಗೆ ಸನ್ನದು ಶುಲ್ಕ ಹೆಚ್ಚುವರಿ ಸನ್ನದು ಶುಲ್ಕದಿಂದ ಸರ್ಕಾರಕ್ಕೆ ಬಂದಿರುವ ವರ್ಗವಾರು ಆದಾಯ ಈ ಕೆಳಕಂಡಂತಿರುತ್ತದೆ.

CL-2 (ವೈನ್ ಸ್ಟೋರ್)	₹. 51,75,000
CL-7 (ಲಾಡ್ಜಿಂಗ್ & ಬೋರ್ಡಿಂಗ್)	₹. 9,66,000
CL-8 (ಮಿಲಿಟರಿ ಕ್ಯಾಂಟೀನ್)	₹. 230
RVB (ರೀಟೈಲ್ ವೆಂಡ್ ಆಫ್ ಬೀರ್)	₹. 34,500
CL-9 (ಬಾರ್ & ರೆಸ್ಟೋರೆಂಟ್)	₹. 51,52,000
CL-11C (ಎಂ.ಎಸ್.ಐ.ಎಲ್)	₹. 3,45,000
Total (ಒಟ್ಟು)	₹. 1,16,72,730

ಬಸವ ವಸತಿ ಮನೆ ಹಂಚಿಕೆ

159(362) ಶ್ರೀ ರಾಜೀವ್ ಪಿ. (ಕುಡಚಿ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) 2013–14ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬಸವ ವಸತಿ ಮನೆಗಳನ್ನು ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಉಳಿದ ಕ್ಷೇತ್ರಗಳಿಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡದೇ ಇರಲು ಕಾರಣವೇನು ;

ಇ) ಈ ರೀತಿಯ ತಾರತಮ್ಯ ಮಾಡಲು ಕಾರಣವೇನು ;

ಈ) ಕುಡಚಿ ಮತ ಕ್ಷೇತ್ರದಲ್ಲಿ ಗುಡಿಸಲು ನಿವಾಸಿಗಳ ಸಂಖ್ಯೆ ಹೆಚ್ಚಾಗಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಕುಡಚಿ ಮತ ಕ್ಷೇತ್ರಕ್ಕೆ ಹೆಚ್ಚುವರಿ ಬಸವ ವಸತಿ ಯೋಜನೆ ಮನೆಗಳನ್ನು ನೀಡದೇ ಇರಲು ಕಾರಣವೇನು ;

ಊ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?